ಸುಮುಕೋಮಲ : ಹೂಂ,...............ಕಾದೂ ಕಾದೂ ಸಾಕಾs ಗ್ಹೋಯ್ತು !

ತ್ರಿಪುರಾಂತಕಯ್ಯ : ಎದುರು ನೋಡ್ತಾ ಇದ್ಯೇನೋ ? !

ಸುಮುಕೋಮಲ : [ಕಣ್ಣು ಅಗಲವಾಗಿ ತೆರೆದು]... ....ಹೂಂ,........ ಎದುರು ನೋಡೀ ನೋಡೀ, ಕಣ್ಣುಗುಡ್ಡೆ ಎಲ್ಲಾ ನೋಯ್ತಾ ಇವೆ ತುಂಬಾ !

ತ್ರಿಪುರಾಂತಕಯ್ಯ : ಅಯ್ಯೋ ಪಾಪ !...........ಏನ್ಮಾಡ್ಲಿ, ಈ ಹೊತ್ತೆಷ್ಹೊತ್ತಾದ್ರೂ ಮುಗೀಲೇವೊಲ್ದು ಆ ಹಾಳಾದ ಬಜಾರ್ ಇರ್ಸ್ಪೆಕ್ಷನ್ !....[ಮೆಣಸಿನಕಾಯ ಚೀಲವನ್ನು ನೀಡುವನು.]

ಸುಮುಕೋಮಲ : [ಕಾಲುಚೀಲದ ಸಾಮಗ್ರಿಯನ್ನು ಮೇಜಿನ ಮೇಲಿಟ್ಟು, ಗಂಡನ ಕೈಯಲ್ಲಿರುವ ಚೀಲವನ್ನು ತೆಗೆದುಕೊಳ್ಳುತ್ತ,]....ತುಂಬಾ ಜೋರಾಗಿ ನಡೆದಿರೋಹಾಗಿದ್ಯಲ್ಲಾ ಬಜಾರ್ ಇರ್ಸ್ಪೆಕ್ಷನ್ನೂ !....ಆಂ ಕ್ಷಿ ! [ಎಂದು ಸೀನಿ,]....ಇದೇನಂದ್ರೆ ಇಷ್ಟು ಘಾಟೂ ? !........[ಎನ್ನುತ್ತ ಚೀಲದಲ್ಲಿ ನೋಡಿ,]....ಓಹೋ ಮೆಣಸಿನ ಕಾಯಿ ಗಡಂಗ್ ಇರ್ಸ್ಪೆಕ್ಷನ್ ನಡೆದಿದೇ! ........ಒಳಗಿಟ್ಟು ಬರ್ತೀನಿ ಮೊದ್ಲು !....[ಚೀಲವನ್ನು (ಇ) ಬಾಗಿಲ ಬಳಿ ಇಟ್ಟು ಬರಲು ಹೋಗುವಳು.]

ತ್ರಿಪುರಾಂತಕಯ್ಯ : ಅಬ್ಬ ! ಎಷ್ಟು ಬಿಸ್ಲು ಹೊರಗೆ !....[ಎನ್ನುತ್ತ ಹ್ಯಾಟು, ಚೆತ್ತ, ಕೋಟುಗಳನ್ನು (ಯ) ನಿಲುವಿಗೆ ಹಾಕುತ್ತ,]........ಮೊದಲು ಸ್ನಾನಮಾಡಿಬಿಡಬೇಕು !

ಸುಮುಕೋಮಲ : [ಚೀಲವನ್ನು (ಇ) ಬಾಗಿಲ ಬಳಿ ಇಟ್ಟು ಬಂದು (ಟ) ಕುರ್ಚಿಯಲ್ಲಿ ಕುಳಿತು,]...............ಏನಾದ್ರೂ ಹೇಳೀಂದ್ರೇ ಬಜಾರ್ ಸಮಾಚಾರಾ !

ತ್ರಿಪುರಾಂತಕಯ್ಯ : ಬಜಾರ್ ಸಮಾಚಾರಾ ಹಾಗಿರ್ಲೀ,............ [ಕೈ ಗಡಿಯಾರ ನೋಡಿಕೊಂಡು,]....ಓಹೋ, ತುಂಬಾ ಹೊತ್ತಾಗಿಬಿಟ್ಟದೆ! ಏಳು, ಊಟಾ ಮಾಡ್ತಾ ಮಾತಾಡೋಣ. ಇಬ್ರೂ ಒಟ್ಟಿಗೇ ಕೂತು ಬಿಡೋಣ ಊಟಕ್ಕೆ !—ಟೇಬಲ್ ಮಿಾಲ್ ! ಆಂ ? !........ಎಲ್ಲಾ ಸಿದ್ಧಮಾಡು. ಅಷ್ಹೊತ್ತಿಗೆ ನಾನ್ಹೋಗಿ ಜಾಗ್ರತೆ ಎರಡು ತಂಬಿಗೆ

ಶಾಂತಪತಿ: [ಏನೂ ತೋಚದೆ] ತ್ರಿಪುರಾಂತಕ ಅನ್ನೋ ಹೆಸರಿಗೆ ಸರಿಯಾಗೇ ಮಾಡ್ತಾನಲ್ಲಾ ಇವನೂ!

ಲಕ್ಷಮ್ಮತ್ತಿಗೆ: ನೀವೊಂದು ಬುದ್ಧೀ ಮಾತಾದ್ರೂ ಹೇಳಬಾರದೇ ಅವರಿಗೆ?.... ಕಡೆಗೆ ನಿಮ್ಮ ತಂಗೀಗಾದ್ರೂ....

ಶಾಂತಪತಿ: [ತಲೆ ಮತ್ತು ಕೈ ಅಲ್ಲಾಡಿಸುತ್ತಾ] ಉಹುಹುಂ, ಅದು ಮಾತ್ರ ಸಾಧ್ಯವಿಲ್ಲ!.... ನೋಡೂ, ನಿನಗೆ ತಿಳಿಯೋದಿಲ್ಲ. ಜಗಳದ ಮಧ್ಯೆ—ಅದರಲ್ಲೂ ಗಂಡಾಹೆಂಡ್ತಿ ಜಗಳದ ಮಧ್ಯೆ ಹೋಗಲೇ ಬಾರದು. ಈಗ ಜಗಳಾಡ್ತಾರೆ, ಉತ್ತರ ಕ್ಷಣದಲ್ಲೇ ಕಲೆತುಕೋತಾರೆ! ಕೇಳಿದೀಯೋ ಇಲ್ವೋ ಗಾದೆ: ಗಂಡಹೆಂಡಿರ ಜಗಳ....?

ಲಕ್ಷಮ್ಮತ್ತಿಗೆ: ಅಷ್ಟೇಂತೀರಾ?.... [ತೆರೆಯ ಸಮೀಪಕ್ಕೆ ಹೋಗಿ ಸ್ವಲ್ಪ ಹೊತ್ತು ಆಲಿಸಿ ಬಂದು,]........ ನೀವ್ಹೇಳೋದು ನಿಜಾಂದ್ರೇ, ಈಗೇನೂ ಗಲಾಟೇನೇ ಕೇಳ್ಸೋದಿಲ್ಲಾ ಅವರ ಮನೇಲೀ!

ಶಾಂತಪತಿ: ಆಗ ಕೇಳಿಸಿದ್ದು ತಾನೇ ಏನೂ? ಜಗಳ ಹೌದೋ ಅಲ್ವೋ ಯಾರಿಗ್ಗೊತ್ತು?

ಲಕ್ಷಮ್ಮತ್ತಿಗೆ: ಆಗ ಚನ್ನಾಗೇ ಕೇಳಿಸ್ತಲ್ಲಾಂದ್ರೇ—ಫಟ್ ಫಟ್ ಅಂತಾ!

ಶಾಂತಪತಿ: ಏನೋ, ಹಿಂದ್ಲು ಬೀದೀ ವೆಂಕಟ್ರಮಣಸ್ವಾಮೀ ದೇವಸ್ಥಾನದಲ್ಲಿ ಸುಬ್ರಹ್ಮಣ್ಯಷ್ಟದ ಪೂಜೆಗೆ ನಗಾರೀ ಹೊಡೆದಿದ್ರಬಹುದೂ!

ಲಕ್ಷಮ್ಮತ್ತಿಗೆ: ಅಯ್ಯೋ, ನ್ಸಂಕೋವ್ಲು ಮುಖ್ಯ ಕೂಕೊಂಡ್ಹಾಗೆ ಕೇಳಿಸ್ತಲ್ಲಾಂದ್ರೇ! ನಗಾರೀ ಹೊಡೆದರೆ ಆಕೇ ಯಾಕೆ ಕೂಕ್ಕೋ ಬೇಕೂ?! ... ಆಗ ಕೇಳಿಸಿದ್ದೇನೋ ಜಗಳಾನೇ!—ಅದರಲ್ಲಿ ಅನುಮಾನ ವೇನೂ ಇಲ್ಲ. ಮತ್ತಾಗ್ಲೇ ಇಬ್ರೂ ಸರಿಹೋಗಿ ಬಿಟ್ರೋ ಏನೋ! ಅವರು ಜಗಳಾಡೋದೂ ತಪ್ಪಿಲ್ಲ, ಕಲೆತ್ಕೊಳ್ಳೋದೂ ತಪ್ಪಿಲ್ಲ! ಎಷ್ಟೋ ಸಲ ನೋಡಿದೀನಿ. ಆತ, ಅದ್ಯಾಕೋ ಇದ್ದಕ್ಕಿದ್ಹಾಗೇ ಸಿಟ್ ಮಾಡ್ಕೊಂಡು, [ಅಣಕಿಸುವಂತೆ] "ಹಾಗ್ಮಾಡ್ತೀಯಾ ಇನ್ಮೇಲೆ, ಹಾಗ್ಮಾಡ್ತೀಯಾ ಇನ್ಮೇಲೆ" ಅಂತ ಕೂಗಾಡ್ತಾನೆ! ಅವಳು, [ಅಣಕಿಸುವಂತೆ] "ಊಂ, ನಾ ಹಾಗೇ ಮಾಡೋದು, ನಾ ಹಾಗೇ ಮಾಡೋದು"

ಅಂತಾಳೆ! ಆಮೇಲೆ ಇಬ್ರೂ ಚನ್ನಾಗಿ ಜಗಳ್ವಾಡ್ತಾರೆ! ಅವರಾಡೋ ಜಗಳಾ ನೋಡಿದರೆ, "ಇನ್ನೇನ್ ಗತಿ, ಇಷ್ಟು ಜಗಳ ಆಡಿದೋರು, ಇವರು ನಿಜವಾಗಿ ಮತ್ತೆ ಕಲೀತಾರ್ಯೇ? ಅಂತ ಅನುಮಾನವಾಗುತ್ತೆ! ಆದ್ರೆ ಉತ್ತರಕ್ಷಣದಲ್ಲೇ ಆತ ಹಾಗ್ಹೋಗಿ ಹೀಗ್ಬಂದು, [ಅಣಕಿಸುವಂತೆ] "ಕೋಮಲ್ಲ, ಸ್ನಂಕೋಮಲ್ಲ, ಟ್ರೆಯುರ್!"—ಅಂತಾನೆ! ಅವಳು, [ಅಣಕಿಸುವಂತೆ:] "ಏನಂದ್ರೆ, ಏನಂದ್ರೆ" ಅಂತ ಕುಲುಕ್ತಾ, ತಾವೆಂದೂ ಜಗಳ ಆಡ್ಲೇ ಇಲ್ವೇನೋನ್ನೋ ಹಾಗೆ ಹೊಂದಿಕೋತಾಳೆ! ಇವೆಲ್ಲಾ ಏನಿರಬಹುದೂಂತೀನಿ! ಇದೇನ್ ರಹಸ್ಯಾನೋ ಗೊತ್ತೇ ಆಗೋದಿಲ್ಲ!

ಶಾಂತಪತಿ : ಅಲ್ವೇ ಲಕ್ಷ್ಮೂ, ಇಷ್ಟು ವರ್ಷ ಆಗಿದೆ; ನಾನು ನಿನ್ ಸಂಗಡ ಎಂದಾದ್ರೂ ಜಗಳ. ಹೋಗ್ಲಿ ಕಡೆಗೆ ಗಟ್ಯಾಗಿ ಒಂದು ಮಾತಾದ್ರೂ ಆಡಿದೇನ್ಯೇ ನೀನೇ ಹೇಳು!....ಆಡಬಾರದು, ಜಗಳ ಆಡಬಾರದು. ಅದರಲ್ಲಿ ಸುಖವಿಲ್ಲ. ನಮ್ಮ ನಮ್ಮಗುರು ಶಾಂತಾನಂದರು ಹೇಳೋಹಾಗೆ, ಸುಖ ಇರೋದು ಶಾಂತೀಲಿ! "ಶಾಂತಮುಲೇಕ ಸೌಖ್ಯಮುಲೇದು!" ಇದ್ರಿಂದ ಪ್ರತಿಯೊಬ್ಬರೂ ಕೋಪತಾಪಗಳನ್ನ ಬಿಟ್ಟು ಶಾಂತಿಸಾಧನ ಮಾಡಬೇಕು.

ಲಕ್ಷಮ್ಮಣ್ಣಿಗೆ : ನಾವೀಗ ಅವರ ಮನೆಗೆ ಹೋಗಿ ಬರೋಣಾಪ್ಲೋ ಬೇಡವೋ?

ಶಾಂತಪತಿ : ತಾವಾಗಿ ನಮ್ಮಿಂದ ಆಗಿದ್ದಲ್ಲ ಜಗಳ!—ನಾವ್ಯಾಕೆ ಹೋಗಬೇಕು?...ನಾನ್ನ ಹೊರಗೇ ಮನೇಲಿ ನಿನ್ನ ಕೆಲಸ ನೀನು ನೋಡಿಕೋ. ನಾನು ಹೊರಗ್ಹೋಗಿ ಈ ಒಂಭತ್ತು ಕಾಗದಾನೂ ಅಂಚೇಗ್ಹಾಕಿ ಬರ್ತೀನಿ—ಆಗ್ಲೇ ಅಂಚೇ ಕಟ್ಟೋ ಹೊತ್ತಾಗುತ್ತ ಬಂತು.

ಲಕ್ಷಮ್ಮಣ್ಣಿಗೆ : ಪೇಟೇಗ್ಹೋಗ್ತೀರಾ? ಹಾಗಾದ್ರೆ ಒಂದು ಬಾರ್ ಸೋಪು ತಕೊಂಡ್ಬನ್ನಿ—ಅಗ್ಲೇ ಮುಗಿದ್ಹೋಗಿದೆ ಮನೇಲಿ; ಬಟ್ಟೆಗ್ಳೆಲ್ಲಾ ತುಂಬಾ ಮಾಸಿಬಿಟ್ಟಿವೆ?

ಶಾಂತಪತಿ: ತರ್ತೀನೆ....[ಕವರು ಎಣಿಸಿಕೊಳ್ಳುತ್ತ (ಇ) ಕಡೆಗೆ ಹೋಗುತ್ತಿರುವನು.]

ಲಕ್ಷಮ್ಮಣ್ಣಿಗೆ : ಹಾಗೇ ಏನಾದ್ರೂ ತರಕಾರೀ ತರಬೇಕಾಗಿತ್ತೂ—ಇದ್ದದ್ದೆಲ್ಲಾ ಈಗಿನಡಿಗ್ಗೇ ಸರಿಹೋಯ್ತು.

